ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

ಬೆಳದಿಂಗಳ ಸಂಗೀತ 298

24 ನವೆಂಬರ್ 2026 * ಮಂಗಳವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ವೀಣೆ




ವಿದುಷಿ ಎಸ್.ವಿ. ಸಹನಾ



ವಿದ್ವಾನ್ ಕಿಶೋರ್ ರಮೇಶ್

ಮೃದಂಗ



ವಿದ್ವಾನ್ ಜಿ.ಎಸ್. ರಾಮಾನುಜಂ

ಘಟಂ

ಸರ್ವರಿಗೂ ಹಾರ್ದಿಕ ಸುಸ್ವಾಗತ

ವಿದುಷಿ ಎಸ್.ವಿ. ಸಹನಾರವರು ಹಿರಿಯ ವೀಣಾ ವಿದ್ವಾಂಸರಾದ ಶ್ರೀ ಎಂ.ಜೆ. ಶ್ರೀನಿವಾಸ ಅಯ್ಯಂಗಾರ್‌ರವರ ಬಳಿ ವೀಣಾವಾದನವನ್ನು ಕಲಿತರು. 14ನೆಯ ವರ್ಷಕ್ಕೆ ಕಛೇರಿ ನಡೆಸುವಷ್ಟು ಪರಿಣತಿಯನ್ನು ಗಳಿಸಿಕೊಂಡಿದ್ದರು. ವೀಣೆ ಮತ್ತು ಗಾಯನ ಎರಡರಲ್ಲೂ ಪಾಂಡಿತ್ಯ ಹೊಂದಿದ್ದ ಪದ್ಮಭೂಷಣ ಟಿ.ಎನ್. ಶೇಷಗೋಪಾಲನ್‌ರವರ ಬಳಿ ಉನ್ನತ ಶಿಕ್ಷಣ ಪಡೆದರು. ಪ್ರಸ್ತುತ ಪದ್ಮಭೂಷಣ ಡಾ. ಟಿ.ವಿ. ಗೋಪಾಲಕೃಷ್ಣನ್‌ರವರ ಬಳಿ ವಾದನದ ಸೂಕ್ಷ್ಮತೆಗಳನ್ನು ಅಭ್ಯಸಿಸುತ್ತಿದ್ದಾರೆ. ಇವೆಲ್ಲದರ ಫಲವಾಗಿ ಇವರ ವಾದನದಲ್ಲಿ ಪರಂಪರೆಯ ಶಾಸ್ತ್ರಶುದ್ಧಿ ಮತ್ತು ಆಧುನಿಕ ಪ್ರಯೋಗಶೀಲತೆಗಳ ಸಂಗಮ ಕಂಡುಬರುತ್ತದೆ. ಮದರಾಸು ವಿಶ್ವವಿದ್ಯಾಲಯದಿಂದ ಕರ್ನಾಟಕ ಸಂಗೀತದಲ್ಲಿ (ವೀಣಾ) ಸ್ನಾತಕೋತ್ತರ, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಗೀತದಲ್ಲಿ ಪಿಎಚ್.ಡಿ ಪಡೆದಿದ್ದಾರೆ. ನೆಟ್–ಯುಜಿಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗವು ನೀಡುವ ಜ್ಯೂನಿಯರ್ ಮತ್ತು ಸೀನಿಯರ್ ಸಂಶೋಧನಾ ಫೆಲೋಶಿಪ್‌ಗೆ ಭಾಜನರು. ಕರ್ನಾಟಕ ಸರ್ಕಾರದ ವೀಣಾವಾದನ ಸೀನಿಯರ್ (ಮೊದಲನೆಯ ರ್‍ಯಾಂಕ್) ಮತ್ತು ವಿದ್ವತ್ ಪರೀಕ್ಷೆಗಳಲ್ಲಿ (ಅತ್ಯುತ್ತಮ ಶ್ರೇಣಿ) ತೇರ್ಗಡೆಯಾಗಿದ್ದಾರೆ. ಸಂಶೋಧನ ಪತ್ರಿಕೆಗಳಲ್ಲಿ ಇವರ ವಿದ್ವತ್ಪೂರ್ಣ ಲೇಖನಗಳು ಪ್ರಕಟವಾಗಿವೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳ ಟಾಪ್ ಗ್ರೇಡ್ ಕಲಾವಿದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ, ಅನನ್ಯ ಯುವ ಪುರಸ್ಕಾರ, ಶ್ರೀ ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ ಪ್ರಶಸ್ತಿಗಳಲ್ಲದೆ, ಬೆಂಗಳೂರಿನ ಗಾಯನ ಸಮಾಜ, ಚೆನ್ನೈನ ಕೃಷ್ಣ ಗಾನಸಭಾ, ಮೈಸೂರಿನ ಜೆಎಸ್‌ಎಸ್ ಸಂಗೀತಸಭಾ, ಗಾನಭಾರತೀ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳು ನಡೆಸಿದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿರುತ್ತಾರೆ. ಅಪೂರ್ವ ಕಲಾನೈಪುಣ್ಯ, ಪ್ರತಿಭೆ ಮತ್ತು ವಾದನ ಮಾಧುರ್ಯಗಳಿಂದ ಶ್ರೋತೃಗಳು ಮತ್ತು ವಿಮರ್ಶಕರಿಂದ ಪ್ರಶಂಸೆ ಪಡೆದಿದ್ದಾರೆ.

ವಿದ್ವಾನ್ ಕಿಶೋರ್ ರಮೇಶ್‌ರವರು ತಂದೆ ವಿದ್ವಾನ್ ಆರ್. ರಮೇಶ್‌ರವರ ಬಳಿ ಏಳನೆಯ ವರ್ಷದಿಂದಲೇ ಮೃದಂಗವಾದನದ ತರಬೇತಿ ಪಡೆದರು. ಅಖಿಲ ಭಾರತ ಆಕಾಶವಾಣಿಯು ನಡೆಸುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಆಕಾಶವಾಣಿಯ 'ಎ' ಶ್ರೇಣಿ ಕಲಾವಿದರು. ಮುಂಬಯಿ ಷಣ್ಮುಖಾನಂದ ಸಂಗೀತ ಸಭೆಯ 'ಎಂ.ಎಸ್. ಸುಬ್ಬಲಕ್ಷ್ಮಿ ಫೆಲೋಶಿಪ್', ಮದರಾಸ್ ಮ್ಯೂಸಿಕ್ ಅಕಾಡೆಮಿಯ 'ಅತ್ಯುತ್ತಮ ಮೃದಂಗ ವಾದಕ', ಕಾರ್ತಿಕ್ ಫೈನ್ ಆರ್ಟ್ಸ್ ಸಂಸ್ಥೆಯ 'ಭರವಸೆಯ ಮೃದಂಗ ವಾದಕ' ಪ್ರಶಸ್ತಿಗಳಿಗೆ ಭಾಜನರು. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವವರು ಮಲೇಷಿಯಾ, ಯುರೋಪ್ ಮೊದಲಾದ ಆರು ರಾಷ್ಟ್ರಗಳಲ್ಲಿ ಸಹಕಲಾವಿದರಾಗಿ ಹಾಗೂ ಅಮೆರಿಕದ ಒಂಬತ್ತು ನಗರಗಳಲ್ಲಿ ಮುಖ್ಯ ಕಲಾವಿದರಾಗಿ ಶ್ರೋತೃಗಳಿಗೆ ರಸದೌತಣ ನೀಡಿದ್ದಾರೆ.

ವಿದ್ವಾನ್ ಜಿ.ಎಸ್. ರಾಮಾನುಜಂರವರು ಸಂಗೀತಗಾರರ ಮನೆತನದಿಂದ ಬಂದ ಪ್ರತಿಭಾನ್ವಿತರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣರವರ ಶಿಷ್ಯರು. ಮೃದಂಗ ಹಾಗೂ ಘಟಂ ವಾದನದಲ್ಲಿ ಸಿದ್ಧಹಸ್ತರು. ಅಖಿಲ ಭಾರತ ಆಕಾಶವಾಣಿ ವಾದ್ಯ ಸಂಗೀತದಲ್ಲಿ ಪ್ರಥಮ ಬಹುಮಾನ ವಿಜೇತರು. ದೇಶವಿದೇಶಗಳಲ್ಲಿ ನಡೆಯುವ ಕಚೇರಿಗಳಲ್ಲಿ ಹಲವಾರು ಖ್ಯಾತ ಸಂಗೀತಗಾರರಿಗೆ ಪಕ್ಕವಾದ್ಯ ಸಹಕಾರ ನೀಡಿ ಖ್ಯಾತಿ ಪಡೆದಿದ್ದಾರೆ. ಸುಸ್ವರಾಲಯ ಸಂಗೀತ ಕಾಲೇಜು ಇತ್ತೀಚೆಗೆ ನೀಡಿರುವ "ಸ್ವರಲಯ ಶೃಂಗ" ಪುರಸ್ಕಾರವೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಫ್ರಾನ್ಸ್ ಹಾಗೂ ಸ್ವಿಟ್ಸರ್ಲೆಂಡ್ ದೇಶಗಳಲ್ಲಿ ಸಂಚರಿಸಿ ಲಯವಾದ್ಯ ಪ್ರಸ್ತುತಿ ಪಡಿಸಿದ್ದಾರೆ.



ಬೆಳದಿಂಗಳ ಸಂಗೀತ 299

23 ಡಿಸೆಂಬರ್ 2026

ಗಾಯನ
ವಿದುಷಿ ಕಾಂಚನ ಎಸ್. ಶ್ರೀರಂಜಿನಿ

ವಯೊಲಿನ್
ವಿದುಷಿ ಸಿ.ವಿ. ಶೃತಿ

ಮೃದಂಗ
ವಿದ್ವಾನ್ ಜಿ.ಎಸ್. ರಾಮಾನುಜಂ

ಫೋನ್: 0821–2548221, 2548223 * ಇಮೇಲ್: sutturmath@jssonline.org